ಆ ಸಲ್ಲಿಸಿದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)-

ಅ ಹೌದು.

ಆ ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಬೆಂಗಳೂರು ಹಾಗೂ ಚನ್ನರಾಯಪಟ್ಟಣಗಳಿಂದ ಆದಿಚುಂಚನಗಿರಿ ಮಠಕ್ಕೆ ಪ್ರತ್ಯೇಕವಾಗಿ ಆರು ಬಸ್ಸುಗಳಲ್ಲಿ ಒದಗಿಸಲಾಗಿದೆ.

ವೈದ್ಯಕೀಯ ಕಾಲೇಜು ಆಸ್ಪತ್ರೆಯು ಹತ್ತಿರ ಳಜ್ಞ (ಎಕ್ಸ್‌ಪ್ರೆಸ್ ಸರ್ವೀಸ್) ವೇಗ ದೂತ ಸರ್ವೀಸುಗಳ ನಿಲುಗಡೆಯನ್ನು ಕೊಡಲಾಗಿದೆ.

ವಿಷಯ: ಬಿ.ಟಿ.ಎಸ್. ಅನ್ನು ಖಾಸಗೀಕರಣಗೊಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1525 (2123)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ ಬೆಂಗಳೂರು ನಗರ ಸಾರಿಗೆ (ಬಿ.ಟಿ.ಎಸ್.)ಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಈವರೆಗೆ ಆಗಿರುವ ನಷ್ಟದ ಪ್ರಮಾಣವೆಷ್ಟು.

ಆ ಬಿ.ಟಿ.ಎಸ್.ನ್ನು ಖಾಸಗೀಕರಣಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ.

ಇ ಈ ಕುರಿತು ಆಗಿರುವ ಪ್ರಗತಿಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)-

ಅ ಪ್ರಸ್ತುತ ಆರ್ಥಿಕ ಸಾಲಿನಲ್ಲಿ ಅಂದರೆ ಏಪ್ರಿಲ್ 1991 ರಿಂದ ಜನವರಿ1992ರವರೆಗೆ ಬೆಂಗಳೂರು ನಗರ ಸಾರಿಗೆ ವಿಭಾಗವು ಸುಮಾರು 19.92ಕೋಟಿ ರೂ.ಗಳ ನಷ್ಟವನ್ನು ಅನುಭವಿಸಿದೆ.

ಆ ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.,

ಇ ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ವಿಷಯ: ರಾಜ್ಯ ಸರ್ಕಾರಕ್ಕೆ ಮೋಟಾರು ವಾಹನ ಬಾಬುಗಳಿಂದ ಬರಬೇಕಾಗಿರುವ ಮೊತ್ತದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1526 (2124)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ರಾಜ್ಯ ಸರ್ಕಾರಕ್ಕೆ ಮೋಟಾರು ವಾಹನ ಬಾಬ್ತುಗಳಿಂದ ಬರಬೇಕಾದ ಬಾಕಿಯ ಮೊತ್ತವೆಷ್ಟು?

ಆ ಬಾಕಿ ವಸೂಲಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ ಮೋಟಾರು ವಾಹನ ಇಲಾಖೆಯ ವ್ಯಾಪ್ತಿಯನ್ನು ತಾಲ್ಲೂಕು ಮಟ್ಟಕ್ಕೆ ಕೇಂದ್ರೀಕರಿಸಲು ಸರ್ಕಾರ ಉದ್ದೇಶಿಸಿದೆಯೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)-

ಅ ರೂ.11,64,78,035-00.

ಆ ಬಾಕಿ ತೆರಿಗೆ ವಸೂಲಿ ಮಾಡಲು ಇಲಾಖೆಯು ವಿವಿಧ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಅಗತ್ಯವಿರುವ ಪ್ರಕರಣಗಳಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ತೆರಿಗೆ ಬಾಕಿಯನ್ನು ಭೂ ಕಂದಾಯವೆಂದು ಪರಿಗಣಿಸಿ ವಸೂಲಿ ಮಾಡಲು ಕೋರಿಕೊಳ್ಳಲಾಗಿದೆ.

ಇ ಇಲ್ಲ.

ವಿಷಯ: ಯಲ್ಬುರ್ಗದಲ್ಲಿ ವಿದ್ಯುತ್ ಸ್ಟೇಶನ್ ಸ್ಥಾಪಿಸುವ ಬಗ್ಗೆ.